**ಸಾಕ್ಷಿಯನ್ನು ದಿಃ 24.01.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನಾನು ಎಂ.ಕಾಂ., ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತಿದ್ದೇನೆ. ನಾನು ಹುಟ್ಟಿದಾಗಿನಿಂದಲೂ ಉದ್ದೂರು ಗ್ರಾಮದಲ್ಲಿ ವಾಸವಾಗಿದ್ದೇನೆ. ಈ ದಾವೆಯ ವಿಷಯವನ್ನು ಸಂಪೂರ್ಣವಾಗಿ ತಿಳಿದುಕೂಂಡಿರುತ್ತೇನೆ. ವಾದಿಯವರು ಹುಚ್ಚಯ್ಯರವರ ಮಕ್ಕಳು ಎಂದು ನನಗೆ ಗೊತ್ತು. ಹುಚ್ಚಯ್ಯ ರವರ ತಂದೆ ಚಿಕ್ಕಕರಿನಾಯಕ ಎಂದರೆ ಸರಿ. ಚಿಕ್ಕಕರಿನಾಯಕ ಇವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. 1 ನೇ ಪ್ರತಿವಾದಿ ಮರಂಕಮ್ಮ ಹಿರಿಯ ಹೆಂಡತಿ ಎಂದರೆ ಇರಬಹುದು. ಮರಂಕಮ್ಮ ರವರ ಮಕ್ಕಳು 2 ನೇ ಪ್ರತಿವಾದಿ ನಿಂಗಮ್ಮ, 3 ನೇ ಪ್ರತಿವಾದಿ ಮಹದೇವನಾಯಕ ಮತ್ತು 4 ನೇ ಪ್ರತಿವಾದಿಯ ಗಂಡ ವಾದಿಯವರ ತಂದೆ ಹುಚ್ಚಯ್ಯ ಎಂದರೆ ಸರಿ. ಕಿರಿಯ ಹೆಂಡತಿ ಸಣ್ಣಮ್ಮ ಎಂದರೆ ಸರಿ. ಸದರಿಯವರಿಗೆ 5 ರಿಂದ ಪ್ರತಿವಾದಿಯವರುಗಳು ಮೂರು ಜನ ಮಕ್ಕಳು ಎಂದರೆ ಸರಿ. ಮರಂಕಮ್ಮ ರವರ ಜೀವಿತ ಅವಧಿಯಲ್ಲಿಯೇ ಸಣ್ಣಮ್ಮ ರವರಿಗೆ ಮದುವೆಯಾಗಿದ್ದರು ಎಂದರೆ ಆ ಬಗ್ಗೆ ಗೊತ್ತಿಲ್ಲ. ಆ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. ಚಿಕ್ಕಕರಿನಾಯಕ, ಮರಂಕಮ್ಮ ಮತ್ತು ಸಣ್ಣಮ್ಮ ಇವರೆಲ್ಲರೂ ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ.

ಸರ್ವೇ ನಂ. 121/2, ಸರ್ವೇ ನಂ. 361/2 ಮತ್ತು ಸರ್ವೇ ನಂ. 88 ರಲ್ಲಿರುವ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಮುಂದುವರೆದು ಸಾಕ್ಷಿಯು ಇನ್ನೂ ಜಮೀನುಗಳು ಇವೆ ಎಂದು ಉತ್ತರಿಸಿರುತ್ತಾರೆ. ಸರ್ವೇ ನಂ. 112/2, 361/1 ರಲ್ಲಿ 6 ಗುಂಟೆ ಜಮೀನು ಇದೆ. ಸದರಿ ಎಲ್ಲಾ ಜಮೀನು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಮೇಲೆ ಹೇಳಿದ ಸ್ವತ್ತುಗಳು ಚಿಕ್ಕಕರಿನಾಯಕರವರಿಗೆ ಅವರ ತಂದೆಯಿಂದ ಬಂದ ಆಸ್ತಿ ಎಂದರೆ ಅದು ಗೊತ್ತಿಲ್ಲ ಪಿತ್ರಾರ್ಜಿತ ಆಸ್ತಿ ಎಂದು ಉತ್ತರಿಸಿರುತ್ತಾರೆ. ಸದರಿ ಎಲ್ಲಾ ಆಸ್ತಿಗಳು ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ಮುಂದುವರೆದು ಅವರಿಗೆ ಭಾಗ ಆಗಿದೆ ಎಂದು ಉತ್ತರಿಸಿರುತ್ತಾರೆ. ದಿಃ 18.06.1981 ರಲ್ಲಿ ವಿಭಾಗ ಆಗಿರುತ್ತದೆ. ನಿಖರವಾಗಿ ದಿನಾಂಕ ಹೇಳಲು ಆಗುವುದಿಲ್ಲ. ಸದರಿ

ವಿಭಾಗ ಪತ್ರ ನೊಂದಣಿ ಆಗಿರುವುದಿಲ್ಲ. ಪಂಚಾಯತ್ ಪಾಲು ಪಾರಿಕತ್ ಆಗಿರುತ್ತದೆ. ಸದರಿ ಪಂಚಾಯತ್ ಪಾಲು ಪಾರಿಕತ್ ಪ್ರಕಾರ ಅವರವರ ಹೆಸರಿಗೆ ಖಾತೆ ಆಗಿರುತ್ತದೆ. ದಿಃ 18.06.1981 ರ ಪಾಲು ಪಾರಿಕತ್ ಪ್ರಕಾರ ಮರಂಕಮ್ಮ ಮತ್ತು ವಾದಿ ಮತ್ತು ಪ್ರತಿವಾದಿಯವರ ಹೆಸರಿನಲ್ಲಿ ಮ್ಯೂಟೇಶನ್ ಆದ ಬಗ್ಗೆ ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ. ಮರಂಕಮ್ಮ ಮತ್ತು ಸಣ್ಣಮ್ಮ ರವರು ಪ್ರತ್ಯೇಕವಾಗಿ ವಿಭಾಗ ಮಾಡಿಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಮುಂದುವರೆದು ನಾವು ಮಾಡಿಕೊಂಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ.

ದಿಃ 18.06.1981 ರ ಪಾಲು ಪಾರಿಕತ್ ಪ್ರಕಾರ ಸಣ್ಣಮ್ಮ ರವರ ಹೆಸರಿಗೆ ಖಾತೆ ಆದ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆ. ಸಾಕ್ಷಿಯು ಕಡತದಲ್ಲಿರುವ ದಾಖಲೆಯನ್ನು ಪರಿಶೀಲಿಸಿ ನಿಡಿ.2 ಎಂದು ಉತ್ತರಿಸಿರುತ್ತಾರೆ. ನಂತರ ಸದರಿ ದಾಖಲೆ ಕೊಟ್ಟಿಲ್ಲ ಎಂದು ಉತ್ತರಿಸಿರುತ್ತಾರೆ. ಮರಂಕಮ್ಮ ಮತ್ತು ಸಣ್ಣಮ್ಮ ರವರ ಮಧ್ಯೆ ವಿಭಾಗ ಆಗಿತ್ತು ಎಂದು ನಿಡಿ. 11 ಅನ್ನು ಸೃಷ್ಠಿಸಿಕೊಂಡು ಬಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಚಿಕ್ಕಕರಿನಾಯಕ ಇವರು ಸಾಲ ಸೌಲಭ್ಯಕ್ಕಾಗಿ ಕೆಲವೊಂದು ಸ್ವತ್ತುಗಳನ್ನು ಮರಂಕಮ್ಮ ಮತ್ತು ಸಣ್ಣಮ್ಮ ಇವರ ಹೆಸರಿಗೆ ಖಾತೆ ಮಾಡಿಸಿದ್ದರು ಎಂದರೆ ಸರಿಯಲ್ಲ. ಆ ಪ್ರಕಾರ ಖಾತೆ ಸದರಿಯವರ ಹೆಸರಿನಲ್ಲಿ ಇತ್ತೆ ಹೊರತು ಯಾವುದೇ ರೀತಿಯ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ. 112/2 ಮತ್ತು 121/2 ರಲ್ಲಿರುವ ಕೆಲವೊಂದು ಸ್ವತ್ತುಗಳನ್ನು ಕುಟುಂಬದ ಕಾನೂನುಬದ್ಧ ಅವಶ್ಯಕತೆಗಾಗಿ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಮಾರಾಟದಿಂದ ಬಂದ ಹಣವನ್ನು ಒಟ್ಟು ಕುಟುಂಬದ ಏಳಿಗೆಗಾಗಿ ಉಪಯೋಗಿಸಿದ್ದರು ಎಂದರೆ ಸರಿಯಲ್ಲ.

ವಾದಿಯ ತಂದೆಗೆ ಹುಚ್ಚನಾಯಕ ಇವರಿಗೆ ಮಧ್ಯಪಾನದ ದುಶ್ಚಟ ಇತ್ತು ಎಂದರೆ ಆ ಬಗ್ಗೆ ಗೊತ್ತಿಲ್ಲ. ಸದರಿ ಹುಚ್ಚನಾಯಕರವರಿಗೆ ದುಶ್ಚಟ ಇದ್ದ ಕಾರಣ ನನ್ನ ತಾಯಿ ಮೋಸದಿಂದ ಸರ್ವೇ ನಂ. 121/2 ರಲ್ಲಿ 18 ಗುಂಟೆ ಜಮೀನನ್ನು ಬರೆಯಿಸಿಕೂಂಡಿದ್ದಾರೆ ಎಂದರೆ ಸರಿಯಲ್ಲ. ದಿಃ 29.03.1994 ರಲ್ಲಿ ಕ್ರಯ ಪತ್ರ ಆಗಿರುತ್ತದೆ ಎಂದರೆ ಸರಿ. ಸದರಿ ಕ್ರಯಪತ್ರ ಈಗ ನೋಡುತ್ತಿದ್ದು

ಅದನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ ನಿಪಿ. 18 ಎಂದು ಗುರುತಿಸಲಾಯಿತು. ಸದರಿ ಕ್ರಯಪತ್ರದ ಆಧಾರದ ಮೇಲೆ ನನ್ನ ತಾಯಿಯ ಹೆಸರಿಗೆ ಮ್ಯೂಟೇಶನ್ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಎಂ.ಆರ್. 11/94-95 ರ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ನಿಪಿ. 19 ಎಂದು ಗುರುತಿಸಲಾಯಿತು. ನನ್ನ ತಾಯಿ ಅಕ್ರಮವಾಗಿ ಬರೆಯಿಸಿಕೊಂಡ ಕ್ರಯಪತ್ರದ ಮೇಲೆ ಮ್ಯೂಟೇಶನ್ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಪ್ರಕಾರವಾಗಿ ಸರ್ವೇ ನಂ. 121/2 ರಲ್ಲಿ 18 ಗುಂಟೆಗೆ ಆರ್.ಟಿ.ಸಿ ನನ್ನ ತಾಯಿಯ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿಯು ಆರ್.ಟಿ.ಸಿ ನೋಡಿ ಗುರುತಿಸಿದ್ದು ನಿಪಿ. 20 ಎಂದು ಗುರುತಿಸಲಾಯಿತು.

ಹುಚ್ಚಯ್ಯ ರವರು ಸದರಿ ಜಮೀನನ್ನು ಅಕ್ರಮವಾಗಿ ಮಾರಾಟ ಮಾಡುವ ಕಾಲಕ್ಕೆ ವಾದಿಯವರು ಸಣ್ಣ ಮಕ್ಕಳಾಗಿದ್ದರು ಎಂದರೆ ಸಾಕ್ಷಿಯು ಸಣ್ಣ ಮಕ್ಕಳು ಎಂದು ಉತ್ತರಿಸಿರುತ್ತಾರೆ. ನನ್ನ ತಾಯಿ ಹುಚ್ಚನಾಯಕರವರಿಗೆ ಕ್ರಯದ ಬದಲಾಗಿ ಯಾವುದೇ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಹಣದಿಂದ ವಾದಿಯವರ ವಿದ್ಯಾಭ್ಯಾಸ ಮತ್ತು ಪಾಲನೆ ಪೋಷಣೆ ಮಾಡಿರುವುದಿಲ್ಲ ಎಂದರೆ ಆ ಬಗ್ಗೆ ಗೊತ್ತಿಲ್ಲ. ಸದರಿ ಕ್ರಯಪತ್ರದಲ್ಲಿ ವಾದಿಯವರನ್ನು ಅಪ್ರಾಪ್ತ ವಯಸ್ಕರು ಎಂದು ತೋರಿಸಿ ಅವರ ತಾಯಿಯನ್ನು ಗಾರ್ಡಿಯನ್ ಆಗಿ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ತಾಯಿಯ ಹೆಸರಿನಲ್ಲಿ ಸದರಿ ಕ್ರಯಪತ್ರ ವಾದಿಯವರ ಕಾನೂನು ಬದ್ಧ ಹಕ್ಕಿಗೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮೋಸದಿಂದ ಕ್ರಯಪತ್ರ ಬರೆಯಿಸಿಕೊಂಡಿರುತ್ತಾರೆ ಎಂದು ಮರಂಕಮ್ಮ ಮತ್ತು ಅವರ ಮಕ್ಕಳು ಮೈಸೂರಿನ ಎ.ಸಿ. ನ್ಯಾಯಾಲಯದಲ್ಲಿ ಮ್ಯೂಟೇಶನ್ ರದ್ದು ಕೋರಿ ಅಪೀಲು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಅಪೀಲು ಸಲ್ಲಿಸಿದ್ದು ನಿಜ ಆದರೆ ನಾವು ಮೋಸದಿಂದ ಮಾಡಿಸಿಕೊಂಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಕ್ರಯಪತ್ರ ಆದ ಕಾರಣ ಎ.ಸಿ. ನ್ಯಾಯಾಲಯಕ್ಕೆ ವ್ಯಾಪ್ತಿ ಇಲ್ಲ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಎ.ಸಿ. ನ್ಯಾಯಾಲಯ ಆದೇಶ ನೀಡಿ ಅಪೀಲು ವಜಾಗೊಳಿಸಿರುತ್ತದೆ ಎಂದರೆ ಸರಿ. ಎ.ಸಿ. ನ್ಯಾಯಾಲಯದ ಆದೇಶ ಆದ ನಂತರ ವಾದಿಯವರು ಈ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು 2 ನೇ ಸಿವಿಲ್

ನ್ಯಾಯಾಲಯ, ಮೈಸೂರಿನಲ್ಲಿ ಅವರ ತಾಯಿ ದಾವೆ ಹೂಡಿದ್ದರು ಎಂದು ಉತ್ತರಿಸಿರುತ್ತಾರೆ. ಸದರಿ ದಾವೆಯ ಸಂಖ್ಯೆ 365 ಆಗಿರುತ್ತದೆ, ವರ್ಷ ಗೊತ್ತಿಲ್ಲ. ಸದರಿ ದಾವೆ ವಜಾ ಆಗಿದೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುತ್ತೇನೋ ಇಲ್ಲವೋ ಗೊತ್ತಿಲ್ಲ. ಸದರಿ ಯಾವ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಮರಂಕಮ್ಮ ಮತ್ತು ಹುಚ್ಚಯ್ಯ ನವರಿಂದ ನನ್ನ ಅಜ್ಜಿ ಮತ್ತು ನನ್ನ ತಾಯಿ ಅಕ್ರಮ ಕ್ರಯಪತ್ರಗಳನ್ನು ಬರೆಯಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ಅವರು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು ನೀಡಲಾಯಿತು.)

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.